## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 1155 / 2022

ಸಿಡಬ್ಲ್ಯೂ- 1
ಪಿಡಬ್ಲ್ಯೂ- 1

ದಿನಾಂಕಃ **06.06.2026.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ವಕೀಲರಾದ ಶ್ರೀ.ಎಸ್.ಎಸ್. ರವರಿಂದಃ

ಅಸಲು ದಾವಾ ನಂಃ 264/2016 ನೇದ್ದನ್ನು ನಿಮ್ಮ ಗಂಡನು 1 ನೇ ಆರೋಪಿ ಹಾಗೂ ಇತರರ ವಿರುದ್ಧ ಸಲ್ಲಿಸಿದ್ದನ್ನು ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ ಎಂದು ಹೇಳುತ್ತಾರೆ. ಸದರಿ ದಾವೆಯನ್ನು ವಿಚಾರಣಾ ನ್ಯಾಯಾಲಯವು ಈ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿತ್ತು ಎಂದರೆ ಸರಿ. ಈ ಪ್ರಕರಣದ ಮನೆಯು ಆರೋಪಿತರಿಗೆ ಸಂಬಂದಪಟ್ಟಿರುತ್ತದೆ ಎಂದರೆ ಸಾಕ್ಷಿಯು ನಮ್ಮದು ಇರುತ್ತದೆ ಎಂದು ಹೇಳುತ್ತಾರೆ. ಸದರಿ ಮನೆಯು ನಮ್ಮಗೆ ಸಂಬಂದಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದೂರನ್ನು ನೀಡಲು ನಾನು ಹಾಗೂ ನನ್ನ ಗಂಡ ಕೂಡಿ ಹೋಗಿದ್ದೇವು. ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ದೂರಿನ ಜೊತೆಗೆ ಜಿಲ್ಲಾಧಿಕಾರಿಯವರ ಆದೇಶದ ಮೇರೆಗೆ ಮಾಡಿದ ಪಂಚನಾಮೆಯನ್ನು ಲಗತ್ತಿಸಿದೆ. ಪಂಚನಾಮೆ ಮಾಡಲು ಜಿಲ್ಲಾಧಿಕಾರಿಯವರು ಆದೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದ ಪ್ರಕಾರ ನಗರಸಭೆಯವರು ಹಾಗೂ ಪೊಲೀಸರು ಆ ದಿನ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿತರ ಮನೆಗೆ ಹೋದಾಗ ಅವರೇ ಇದ್ದರು. 1 ನೇ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದನು. 1 ನೇ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದನು ಎಂದು ನಾನು ದೂರಿನಲ್ಲಿ ಬರೆದಿರುತ್ತೇನೆ. ನನಗೆ ಯಾರು ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮಗೆ ಯಾರು ಸಹ ಜೀವ ಬೆದರಿಕೆಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆದ ಜಗಳದಿಂದ ನನಗೆ ಹಾಗೂ ನನ್ನ ಗಂಡನಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ನನಗೆ ಹಾಗೂ ನನ್ನ ಗಂಡನಿಗೆ ಆರೋಪಿತರು ಹೊಡೆಬಡೆ ಮಾಡಿದ್ದರು. ಆರೋಪಿತರು ನನಗೆ ಹಾಗೂ ನನ್ನ ಗಂಡನಿಗೆ ಎರಡೆರಡು ಏಟು ಹೊಡೆದಿದ್ದರು. 1 ನೇ ಆರೋಪಿತನು ಕೈಯಿಂದ ನನ್ನ ಬೆನ್ನು ಹಿಂದುಗಡೆ ಹೊಡೆದಿದ್ದರು. 2 ನೇ ಆರೋಪಿತಳು ನನ್ನ ಮೈಗೆ ಕೈಯಿಂದ ಹೊಡೆದಿದ್ದರು. 3 ನೇ ಆರೋಪಿತನು ನಮ್ಮಗೆ ಹೊಡೆಬಡೆ ಮಾಡಿರುವುದಿಲ್ಲ ಆದರೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈರು ನನಗೆ ಹೊಡೆಬಡೆ

ಮಾಡಿದರು ಎಂದು ನಾನು ದೂರಿನಲ್ಲಿ ಬರೆಸಿರುತ್ತೇನೆ. ನಮ್ಮ ಹಾಗೂ ಆರೋಪಿತರ ನಡುವೆ ಯಾವುದೇ ಜಗಳ ಆಗದಿದ್ದರು ಸಹ ನಾನು ಜಗಳ ಆಗಿತ್ತು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಯವರ ಆದೇಶದ ಮೇರೆಗೆ ಪೊಲೀಸರು ಮತ್ತು ನಗರಸಭೆಯವರು ಬಂದು ಪಂಚನಾಮೆ ಮಾಡಿ ಮನೆ ನಂಃ 2-14/22 ನೇದ್ದರ ಮನೆಗೆ ಬೀಗ ಹಾಕಿ ಅದರ ಕಬ್ಜೆಯನ್ನು ನಮ್ಮಗೆ ಒಪ್ಪಿಸಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸ್ವಲ್ಪ ದಿನಗಳ ನಂತರ ನಾನು ಬಂದು ನೋಡಿದಾಗ ಆರೋಪಿತರ ಸದರಿ ಮನೆಯ ಕೀಲಿಯನ್ನು ಮುರಿದು ಬಾಡಿಗೆಗೆ ನೀಡಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. 2 ವರ್ಷ 6 ತಿಂಗಳ ಹಿಂದೆ ಆಗಸ್ಟ್ - 15 ರಂದು ಬೆಳಗ್ಗೆ 11 ಗಂಟೆಗೆ ನಾನು ಹಾಗೂ ಚಾಸಾ-4 ರವರು ಅಲ್ಲಿಗೆ ಹೋಗಿ ಆರೋಪಿತರಿಗೆ ಏಕೆ ನೀವು ಮನೆಯ ಕೀಲಿಯನ್ನು ಮುರಿದಿರುತ್ತೀರಿ ಅಂತಾ ಕೇಳಿದ್ದಾಗ 2 ನೇ ಆರೋಪಿತಳು ನಮ್ಮಗೆ ಇನ್ನೋಮ್ಮೆ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತಾ ಬಿಡುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿತನು ನಮ್ಮಗೆ ಬೋಸುಡಿ ಮಕ್ಕಳೇ ಅಂತಾ ಅಂದು ಜೀವ ಬೆದರಿಕೆಯನ್ನು ಹಾಕಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರು ಬಂದು ಜಗಳವನ್ನು ಬಿಡಿಸಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂತರ ಪಿ.ಎಸ್.ಐ ರವರು ಬಂದು ಪೋಟೋವನ್ನು ತೆಗೆದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಿರಿಯರನ್ನು ವಿಚಾರಿಸಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 02.09.2022 ರಂದು ಪೊಲೀಸರು ನನಗೆ ಗುನ್ನಾ ಜಾಗಕ್ಕೆ ಕರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಪೊಲೀಸರು ಮಾಡಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ಎರಡು ಪೋಟೋಗಳನ್ನು ತೆಗೆದಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.